ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ: 23–12–2019**

# ಪತ್ರಿಕಾ ಪ್ರಕಟಣೆ

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

**ಬೆಂಗಳೂರು, ಡಿಸೆಂಬರ್ 23 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು 2015 ನೇ ಸಾಲಿನ ಗ್ರೂಪ್ – 'ಎ' ಮತ್ತು 'ಬಿ' ವೃಂದದ ಗೆಜೆಟೆಡ್ ಪ್ರೊಬೇಷನರ್ಸ್ 428 (358–+70) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in/lists (Provisional Selection List) ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದ್ದು, ಒಂದು ವೇಳೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಈ ಆಯ್ಕೆಪಟ್ಟಿ ಪ್ರಕಟಗೊಂಡ 7 ದಿನಗಳೊಳಗಾಗಿ ಅಂದರೆ ದಿನಾಂಕ: 31–12–2019 ರ ಒಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಅಯೋಗ, "ಉದ್ಯೋಗಸೌಧ" ಬೆಂಗಳೂರು – 560 001 ಇಲ್ಲಿಗೆ ಸಂಪರ್ಕಿಸಬಹುದಾಗಿದ್ದು, ಕೊನೆಯ ದಿನಾಂಕದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗ ಪ್ರಕಟಣೆ ತಿಳಿಸಿದೆ.

## ವಿವಿಧ ಇಲಾಖೆಗಳಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಬ್ಯಾಕ್‌ಲಾಗ್ ಹುದ್ದೆಗಳು ಬಹುತೇಕ ಭರ್ತಿ – ಸಚಿವ ರಾಮದಾಸ್ ಅಶಾವಳೆ

ಬೆಂಗಳೂರು, ಡಿಸೆಂಬರ್ 23 (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಬ್ಯಾಕ್‌ಲಾಗ್ ಹುದ್ದೆಗಳನ್ನು ಬಹುತೇಕ ಭರ್ತಿಮಾಡಲಾಗಿದ್ದು, ಉಳಿದ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿಮಾಡಲು ಕ್ರಮವಹಿಸುವಂತೆ ತಿಳಿಸಲಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ರಾಮದಾಸ್ ಅಠಾವಳೆ  ಅವರು ಹೇಳಿದರು.

ಇಂದು ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ನಡೆದಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಮೀಸಲಿರುವ ಹುದ್ದೆಗಳನ್ನು ತುಂಬಿರುವ ಕುರಿತು ಹಮ್ಮಿಕೊಂಡಿದ್ದ ಪರಿಶೀಲನಾ ಸಭೆ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ 2001 ರಲ್ಲಿ 19,115 ಹುದ್ದೆಗಳು ಖಾಲಿ ಇದ್ದವು.  ಅವುಗಳಲ್ಲಿ 2019 ನೇ ಸಾಲಿನವರೆಗೆ 16,927 ಹುದ್ದೆಗಳನ್ನು ಭರ್ತಿಮಾಡಲಾಗಿದ್ದು, ಇನ್ನು ಎರಡು ಸಾವಿರಕ್ಕೂ ಹೆಚ್ಚಿನ ಹುದ್ದೆಗಳನ್ನು ಭರ್ತಿಮಾಡಬೇಕಾಗಿದ್ದು, ಶೀಘ್ರದಲ್ಲಿ ಭರ್ತಿಮಾಡಲು ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ ಎಂದರು.

ರಾಜ್ಯದಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಹಾಗೂ ಸಮಸ್ಯೆಗಳ ಪರಿಹಾರ ಕುರಿತು ರಾಜ್ಯ ಮಟ್ಟದಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣ ಸಮಿತಿಯನ್ನು ಶಾಸಕಾಂಗದ ಪ್ರತಿನಿದಿ ಮತ್ತು ಉನ್ನತ ಅಧಿಕಾರಿಗಳನ್ನೊಳಗೊಂಡ ರಚಿಸಲಾಗಿದ್ದು, ಪ್ರತಿ 15 ದಿನಗಳಿಗೊಮ್ಮೆ ಸಭೆಗಳನ್ನು ನಡೆಸಲಾಗುತ್ತದೆ ಎಂದು ಹೇಳಿದರು.

ರಾಜ್ಯದಲ್ಲಿರುವ ವೃದ್ಧಾಶ್ರಮ ಹಾಗೂ ವೃದ್ಧರಿಗೆ ನೀಡುವ ಪಿಂಚಣಿ ಸೇರಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದಲ್ಲಿ ನಡೆಯುತ್ತಿರುವ ಯೋಜನೆಗಳ ಕುರಿತು ಮಾತನಾಡಿದ ಕೇಂದ್ರ ಸಚಿವರು ರಾಜ್ಯದಲ್ಲಿ ಒಟ್ಟು 1,225 ವೃದ್ಧಾಶ್ರಮಗಳು ಇದ್ದು, ರಾಜ್ಯದ ಜನಸಂಖ್ಯೆಯ ಶೇಕಡಾ 7 ರಷ್ಟು ವೃದ್ಧರು ಗೌರವಧನ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಮೈಸೂರಿನ  ಸಾಲಿಗ್ರಾಮದಲ್ಲಿ  ಇತ್ತೀಚೆಗೆ ನಡೆದ ದಲಿತ ಹಾಗೂ ಸವರ್ಣೀಯರ ನಡುವೆ ನಡೆದ ಗಲಭೆ ಸೇರಿದಂತೆ ಹಲವು ಘಟನೆಗಳು ತಮ್ಮ ಗಮನಕ್ಕೆ ಬಂದಿದ್ದು, ಎಲ್ಲಾ ಜಾತಿ, ಧರ್ಮ ಮೀರಿ ಕೇಂದ್ರ ಸರ್ಕಾರ ಜನರಿಗಾಗಿ ಯೋಜನೆಗಳನ್ನು ರೂಪಿಸಿದ್ದು, ಹಿಂದುಳಿದ ವರ್ಗದ ಜನರ ಜೊತೆ ತಮ್ಮ ಸರ್ಕಾರ ಸದಾ ಇರುತ್ತದೆ ಎಂದು ಅವರು ಹೇಳಿದರು.

## ವಿಶೇಷ ಹೊರಾಂಗಣ ಸಾಹಸ ಚಟುವಟಿಕೆಗೆ ನೋಂದಣಿ

ಬೆಂಗಳೂರು, ಡಿಸೆಂಬರ್ 23 (ಕರ್ನಾಟಕ ವಾರ್ತೆ)

ಲಾಲ್‌ಬಹದ್ದೂರ್ ಮೌಂಟನೀರಿಂಗ್ ಇನ್ಸ್‌ಟಿಟ್ಯೂಟ್ ವತಿಯಿಂದ 2020ನೇ ಸಾಲಿನಲ್ಲಿ ನಡೆಯಲಿರುವ ವಿಶೇಷ ಹೊರಾಂಗಣ ಸಾಹಸ ಚಟುವಟಿಕೆಯಲ್ಲಿ ಭಾಗವಹಿಸಲು ಎಲ್ಲಾ ವಯೋಮಾನದವರು ತಮ್ಮ ಸ್ವ-ವಿವರವನ್ನು ಸಲ್ಲಿಸಿ ಸದಸ್ಯವನ್ನು ಪಡೆದುಕೊಳ್ಳಲು ಅವಕಾಶವನ್ನು ನೀಡಲಾಗಿದೆ.

ಆಸಕ್ತರು ದಿನಾಂಕ: 05-01-2020 ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಇನ್ಸ್‌ಟಿಟ್ಯೂಟ್ ಕೊಠಡಿ ಸಂಖ್ಯೆ 27, ದ್ವಾರ 11/12 ನಲ್ಲಿ ತಾವು ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಪ್ರತಿ ತಿಂಗಳ ಚಾರಣಗಳು – ವನ್ಯಜೀವಿಗಳ ಅಧ್ಯಯನ ವಾರ್ಷಿಕ ವ್ಯಕ್ತಿವಿಕಾಸ ತರಬೇತಿ, ಶಿಲಾರೋಹಣ, ಹಿಮಾಲಯದ ಹಲವು ಬಗೆಯ ತರಬೇತಿ, ಜಲಸಾಹಸ ಮತ್ತು ಮರಳುಗಾಡಿನ ಯಾನ ಮುಂತಾದವು ಸೇರಿದೆ. ಛಾಯಾಚಿತ್ರಗಾರರಿಗೆ ವಿಶೇಷ ತರಬೇತಿ ನೀಡಲಾಗುವುದು.

ಹೆಚ್ಚಿನ ಮಾಹಿತಿಗೆ ಡಾ ಬಿ. ಆರ್. ರಾಮಚಂದ್ರರಾವ್ ಕಾಳೆ, ಸಂಸ್ಥಾಪಕ ಕಾರ್ಯದರ್ಶಿ ಇವರನ್ನು ಮೊಬೈಲ್ : 93418-22000 , 080-26566468 ರಲ್ಲಿ ಅಥವಾ ಲಾಲ್‌ಬಹದ್ದೂರ್ ಮೌಂಟನೀರಿಂಗ್ ಇನ್ಸ್‌ಟಿಟ್ಯೂಟ್ ನಂ 8 ಸುಶೀಲಾ ರಸ್ತೆ, ಚಿಕ್ಕಮಾವಳ್ಳಿ ಬಸವನಗುಡಿ, ಬೆಂಗಳೂರು-4 ರಲ್ಲಿ ಕಾರ್ಯಾಲಯದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## <u>ಅನಿಲ ಸೋರಿಕೆಗೆ ಕ್ರಮ</u>

ಬೆಂಗಳೂರು, ಡಿಸೆಂಬರ್ 23 (ಕರ್ನಾಟಕ ವಾರ್ತೆ)

ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ (GAIL) ರವರು ಅಳವಡಿಸಿರುವ ನೈಸರ್ಗಿಕ ಅನಿಲ ಸರಬರಾಜು ಕೊಳವೆಗಳಲ್ಲಿ ಆಗಾಗ್ಗೆ ಸಂಭವಿಸುತ್ತಿರುವ ಅನಿಲ ಸೋರಿಕೆಯಿಂದ ಉಂಟಾಗುತ್ತಿರುವ ಅಗ್ನಿ ಅವಘಡಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯ ಸಭೆ ನಡೆಸಿದೆ. ಸಭೆಯಲ್ಲಿ ಅಗ್ನಿ ಅವಘಡಗಳನ್ನು ನಿಯಂತ್ರಿಸಲು ಹಾಗೂ ತಡೆಗಟ್ಟುವ ಕುರಿತು ಸಲಹೆ ಸೂಚನೆಗಳನ್ನು ಸಿದ್ಧಪಡಿಸಿ GAIL ಗೆ ಕಳುಹಿಸಿದೆ. ಜೊತೆಗೆ ಇದೇ ಪ್ರತಿಯನ್ನು ಬಿ.ಬಿ.ಎಂ.ಪಿ, ಬೆಂಗಳೂರು ಜಲಮಂಡಳಿ ಹಾಗೂ

**ಬೆಸ್ಕಾಂ ಕಚೇರಿಗಳಿಗೆ ಸಹ ಕಳುಹಿಸಲಾಗಿದೆ ಎಂದು ನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು.

**ಬೆಂಗಳೂರು, ಡಿಸೆಂಬರ್ 23 (ಕರ್ನಾಟಕ ವಾರ್ತೆ)**

**"ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ"** (ಡಿ.ಸಿ.ಎಂ) ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಮತ್ತು ರಾಮನಗರ ಜಿಲ್ಲೆಗಳ ಖಾಸಗಿ ಅಭ್ಯರ್ಥಿಗಳಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಂದ ಮತ್ತು ಎಲ್ಲಾ ವಿವಿಧ ಸಹಕಾರ ಸಂಘ/ಬ್ಯಾಂಕ್‌ಗಳ ಉದ್ಯೋಗಿಗಳಿಂದ ಹಾಗೂ ಖಾಸಗಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಪಡೆಯಲು ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೂ ಸಹ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ವಯೋಮಿತಿ **16 ವರ್ಷ** ದಾಟಿದವರಾಗಿರಬೇಕು. ಅರ್ಜಿಯನ್ನು ದಿನಾಂಕ: **31.12.2019** ರ ಒಳಗಾಗಿ ಸಲ್ಲಿಸುವುದು. ತರಬೇತಿ ಪಡೆಯುವ ಎಲ್ಲಾ ಅಭ್ಯರ್ಥಿಗಳಿಗೆ ಮಾಹೆಯಾನ ರೂ. **400/-** ಶಿಷ್ಯ ವೇತನ ನೀಡಲಾಗುವುದು ಹಾಗೂ 30 ವರ್ಷದ ಒಳಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮಾಸಿಕ ರೂ. **500/-** ಶಿಷ್ಯ ವೇತನ ನೀಡಲಾಗುವುದು.

ಡಿಪ್ಲೋಮಾ ಕೋರ್ಸ್ ಪಡೆದ ಅಭ್ಯರ್ಥಿಗಳಿಗೆ ಸಹಕಾರ ಸಂಘ/ ಸಂಸ್ಥೆ / ಬ್ಯಾಂಕುಗಳ ಉದ್ಯೋಗ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪದೋನ್ನತಿ ನೀಡಲು ಈ ತರಬೇತಿಯು ಕಡ್ಡಾಯವಾಗಿರುತ್ತದೆ ಮತ್ತು ಡಿ.ಸಿ.ಎಂ ಕೋರ್ಸಿನ ಪಠ್ಯಕ್ರಮದಲ್ಲಿ ಸಹಕಾರ ಕ್ಷೇತ್ರದ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಗೂ ಇನ್ನಿತರೆ ಹುದ್ದೆಗಳಿಗೆ ಅನುಕೂಲವಾಗುತ್ತದೆ.

ಅರ್ಜಿ ದೊರೆಯುವ ಸ್ಥಳ: **ಕೆ.ಐ.ಸಿ.ಎಂ., ಪ್ರಾದೇಶಿಕ ಸಹಕಾರ ನಿರ್ವಾಹಣಾ ಸಂಸ್ಥೆ ಆವರಣ, ನಂ. 67, ಪದ್ಮನಾಭ ನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560070. ದೂ: 080–26692046, 9902189872, 9964002461, Email-kicmprinci@gmail.com**